ಆದ್ದರಿಂದ ಈ ಪ್ರಸ್ತಾವನೆಯನ್ನು ಕೂಡಲೇ ತರಿಸಿಕೊಂಡು ಅದಕ್ಕೆ ಮೊದಲ ಆದ್ಯತೆಯನ್ನು ಕೊಡುವಂತಹದ್ದು ಆಗಬೇಕೆಂದು ನಾನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಅಧ್ಯಕ್ಷರೆ, 18ನೇ ಏಪ್ರಿಲ್ 2003 ರಂದು ಮಾನ್ಯ ಸದಸ್ಯರು 5 ಲಕ್ಷ ಗ್ಯಾಲನ್ ಸಾಮರ್ಥ್ಯದ ಮೇಲ್ಮಟ್ಟದ ನೀರು ಸಂಗ್ರಹಣ ಟ್ಯಾಂಕನ್ನು ಸಾರ್ವಜನಿಕ ಹಿತದೃಷ್ಟಿಯಿಂದ ನಿರ್ಮಾಣ ಮಾಡಬೇಕೆಂದು ವಿನಂತಿಯನ್ನು ಮಾಡಿಕೊಂಡಿದ್ದಾರೆ. ಈಗ ಅಲ್ಲಿ 3 ಲಕ್ಷ ಗ್ಯಾಲನ್ ನೀರು ಸಂಗ್ರಹಣ ಸಾಮರ್ಥ್ಯವಿದೆ, ಅದನ್ನು ಈಗ 5 ಲಕ್ಷ ಗ್ಯಾಲನ್ ಗೆ ಏರಿಸಬೇಕೆಂದು ತಾವು ಏನು ವಿನಂತಿಯನ್ನು ಮಾಡಿಕೊಂಡಿದ್ದೀರಿ, ಅದಕ್ಕೆ ಅಂದಾಜು ಪತ್ರಿಕೆಯನ್ನು ತಯಾರು ಮಾಡಿ ಎಂದು ಹೇಳಿ ನೀರು ಮತ್ತು ಒಳಚರಂಡಿ ಮಂಡಳಿಗೆ ಈಗಾಗಲೇ ನಾವು ಸೂಚನೆಯನ್ನು ಕೊಟ್ಟಿದ್ದೇವೆ,

ಶ್ರೀ ಉಮೇಶ್ ವಿ. ಕತ್ತಿ : ಅದನ್ನು ಕೂಡಲೇ ಮಾಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಅಲ್ಲಿ ಕುಡಿಯುವ ನೀರು ಬರುತ್ತಿದೆ, ಆದರೆ ನೀರು ಸಂಗ್ರಹ ಮಾಡುವುದಕ್ಕೆ ನೀರಿಲ್ಲ. ಇವತ್ತು ನಮ್ಮ ಹುಕ್ಕೇರಿ ನಗರದಲ್ಲಿ 40 ಸಾವಿರದಷ್ಟು ಜನಸಂಖ್ಯೆ ಇದೆ, ಆ 3 ಲಕ್ಷ ಗ್ಯಾಲನ್ ನೀರು ಸಂಗ್ರಹಣ ಟ್ಯಾಂಕ್ ನಿಂದ ನೀರು ಸರಬರಾಜು ಆಗುತ್ತಿಲ್ಲ. ಡೇ ಅಂಡ್ ನೈಟ್ ಕೆಲಸ ಮಾಡಿದರೂ ನೀರನ್ನು ಸರಬರಾಜು ಮಾಡುವುದಕ್ಕಾಗುತ್ತಿಲ್ಲ. ಆದಷ್ಟು ಬೇಗ ಅಂದಾಜು ಪತ್ರಿಕೆಯಾಗಿ ಅದಕ್ಕೆ ಮಂಜೂರಾತಿಯನ್ನು ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ : ಮಾಡಿಕೊಡುತ್ತೇವೆ.

ಮಹಾನಗರ ಪಾಲಿಕೆ ನೌಕರರ ವರ್ಗಾವಣೆ

587 (5033) : **ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್ಕಲ್)** : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರದ ವಿವಿಧ ಇಲಾಖೆಗಳ ಮಾದರಿಯಲ್ಲಿ ಮಹಾನಗರ ಪಾಲಿಕೆ ನೌಕರರನ್ನು ಕೂಡ ವರ್ಗಾವಣೆ ವ್ಯಾಪ್ತಿಗೆ ತರಲು ಸರ್ಕಾರ ಯೋಚಿಸಿದೆಯೆ;

ಆ) ನಗರ ಪಾಲಿಕೆ ನೌಕರರು ಪ್ರಾರಂಭದಿಂದ ನಿವೃತ್ತಿಯವರೆಗೆ ಒಂದೇ ನಗರ ಪಾಲಿಕೆಯಲ್ಲಿ ಕೆಲಸ ಮಾಡುವುದರಿಂದ ಅವರು ಸ್ಥಾಪಿತ ಹಿತಾಸಕ್ತಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) ನಗರ ಪಾಲಿಕೆಯ ಆಡಳಿತ ಹೆಚ್ಚು ಜನಪರವಾಗುವ ದಿಸೆಯಲ್ಲಿ ವರ್ಗಾವಣೆಯ ಕ್ರಮವನ್ನು ಸರ್ಕಾರ ಕೈಗೊಳ್ಳುವುದೆ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು):

ಅ) ಹೌದು.

ಆ) ಬಂದಿದೆ.

ಇ) ಪರಿಶೀಲನೆಯಲ್ಲಿದೆ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ : ಮಾನ್ಯ ಅಧ್ಯಕ್ಷರೆ, ನಾನು ಕಳೆದ 3 ವರ್ಷಗಳಿಂದಲೂ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಸಾಧಾರಣವಾಗಿ ಸರಿಯಾದ ಉತ್ತರವು ಬರುತ್ತಿದೆ, ಅದು ಇನ್ನೂ ಅನುಷ್ಠಾನಕ್ಕೆ ಬಂದಿಲ್ಲ. ದಯವಿಟ್ಟು ಈ ಕೆಲಸವನ್ನು ಆದಷ್ಟು ಬೇಗ ಅನುಷ್ಠಾನಕ್ಕೆ ತರಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಕರ್ನಾಟಕದಲ್ಲಿ 6 ಕಾರ್ಪೊರೇಷನ್ ಗಳಲ್ಲಿ ಅನ್ಯೋನ್ಯತೆಯಿಂದ ಟ್ರಾನ್ಸ್ ಫರ್ ಮಾಡಿದರೆ ಆಗಬಹುದು, ಇಲ್ಲದೆ ಇದ್ದರೆ ಇವರು ನಮ್ಮ ಅಜ್ಜನೆಟ್ಟ ಗೋಳಿಮರದ ರೀತಿಯಲ್ಲಿ ಅಲ್ಲಿಯೇ ಇದ್ದು ಅನೇಕ ಅವ್ಯವಹಾರಗಳನ್ನು ಮಾಡುತ್ತಿದ್ದಾರೆ. ಇತ್ತೀಚೆಗೆ ಕಮೀಷನರ್ ಗಳನ್ನು, ಎಕ್ಸಿಕ್ಯೂಟೀವ್ ಇಂಜಿನಿಯರ್ ಗಳನ್ನು ಟ್ರಾನ್ಸ್ ಫರ್ ಮಾಡುವಷ್ಟರ ಮಟ್ಟಿಗೆ ಈಗ ಅಲ್ಲಿಯೇ ಉಳಿದಂತಹ ಕೆಲವು ನೌಕರರುಗಳು ಮಾಡುತ್ತಿದ್ದಾರೆ. ಆ ರೀತಿಯಾಗಿ 30 ರಿಂದ 40 ವರ್ಷ ಒಂದೇ ಕಡೆ ಇದ್ದರೆ ಆಗುವುದಿಲ್ಲ. ನಾವು ಜಿಲ್ಲಾ ಪಂಚಾಯಿತಿಯಲ್ಲಿ ಮಾಡುತ್ತೇವೆ, ಗ್ರಾಮ ಪಂಚಾಯಿತಿಯಲ್ಲಿಯೂ ಸಹ ಟ್ರಾನ್ಸ್ ಫರ್ ಮಾಡುತ್ತೇವೆ, ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್ ರವರು ನಮ್ಮ ಮಂಗಳೂರು ಮಹಾನಗರ ಪಾಲಿಕೆಗೆ ಉತ್ತಮವಾದಂತಹ ಯೋಜನೆಗಳನ್ನು ಕೊಟ್ಟಿದ್ದಾರೆ. ಅದೇ ರೀತಿಯಾಗಿ ಈ ಒಂದು ವರ್ಗಾವಣೆ ಮಾಡುವುದನ್ನು ಸಹ ಮಾಡಬೇಕೆಂದು ನಾನು ತಮ್ಮ ಮುಖಾಂತರ ಅವರಲ್ಲಿ ವಿನಂತಿಸುತ್ತಿದ್ದೇನೆ.

ಶ್ರೀ ಎನ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು : ಮಾನ್ಯ ಯೋಗೀಶ್ ಭಟ್ ರವರೆ, ನಾನು ಅವರಿಗೆ ಅಲೌವ್ ಮಾಡಿದ್ದೇನೆ.

ಶ್ರೀ ಎನ್. ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೆ, ಒಂದೇ ಒಂದು ನಿಮಿಷ ಮಾತನಾಡುತ್ತೇನೆ, ಏಕೆಂದರೆ, ಮಹಾನಗರಪಾಲಿಕೆ ನಮಗೂ ಕವರ್ ಆಗುತ್ತದೆ.

ಅಧ್ಯಕ್ಷರು : ಸ್ವಲ್ಪ ತಡೆಯಿರಿ, ನಾನು ಮೊದಲೇ ಹೇಳಿದೆ, ಮೆಯಿನ್ ಕ್ವೆಶ್ಚನ್ ಯಾರು ಕೇಳಿರುತ್ತಾರೋ ಅವರು ಕೇಳಬಹುದು. ಈಗ ಸಮಯ ಬೇರೆ ಮುಗಿದಿದೆ. ಏನೋ ಒಂದೆರಡು ಪ್ರಶ್ನೆಗಳಿರುವುದರಿಂದ ಬೇಗನೆ ಮುಗಿಸಿಬಿಡೋಣವೆಂದು ನಾನು ಹೇಳಿದೆ. ಅದರ ಮೇಲೆ ನೀವು ಸಪ್ಲಿಮೆಂಟರಿ ಕೇಳಿದರೆ ಹೇಗೇ? I know you are from Mangalore, alright ಕೇಳಿ.

ಶ್ರೀ ಎನ್. ಯೋಗೀಶ್ ಭಟ್ : ಮಹಾನಗರ ಪಾಲಿಕೆಯಲ್ಲಿ ಈ ಟ್ರಾನ್ಸ್‌ಫರ್ ನಿಯಮವನ್ನು ಯಾವ ಪ್ರಕಾರ ತಾವು ತರುತ್ತಿದ್ದೀರಿ, ಅದನ್ನು ತಕ್ಷಣ ತರಬೇಕೆನ್ನುವಂತಹ ಆಗ್ರಹವನ್ನು ಮಾಡುತ್ತಿದ್ದೇನೆ. ಇದು ಕೇವಲ ಮಹಾನಗರಪಾಲಿಕೆ ಹಾಗೂ ನಗರಪಾಲಿಕೆಗಳಿಗೆ ಮಾತ್ರವಲ್ಲ, ಹೆಚ್ ಯುಡಿ ಅಥವಾ ಇತರ ಇಲಾಖೆಗಳಲ್ಲೂ ಕೂಡ ಇದು ಬರಬೇಕು. ಅಲ್ಲಿ ಬಹಳ ವರ್ಷಗಳಿಂದಲೂ ಕೊಳೆತು ಹೋಗುವಂತಹ ಸ್ಥಿತಿ ಒದಗಿಬಂದಿದೆ. ನಿಮ್ಮ ಇಂತಹ ಸರ್ಕಾರದ ಇಲಾಖೆಗಳಲ್ಲೂ ಕೂಡ ವರ್ಗಾವಣೆಯನ್ನು ತರಬೇಕೆಂದು ಆಗ್ರಹವನ್ನು ಮಾಡುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿಜಯ್ ಕುಮಾರ್‌ರವರು ಏನು ಪ್ರಶ್ನೆಯನ್ನು ಮಾಡಿದ್ದಾರೆ, ಇದು ಬಹಳ ವರ್ಷಗಳಿಂದಲೂ ಇರುವಂತಹ ಪಿಡುಗಾಗಿದೆ. ಇದರ ಬಗ್ಗೆ ಬಹಳ ಒತ್ತಾಯಗಳನ್ನು ವರ್ಷವರ್ಷ ಎಲ್ಲಾ ಶಾಸಕರುಗಳು ಮಾಡುತ್ತಿರುತ್ತಾರೆ. ಹಿಂದೆ ನಮ್ಮ ದಿನೇಶ್ ಗುಂಡುರಾವ್‌ರವರು ಕೂಡ ಈ ಪ್ರಶ್ನೆಯನ್ನು ಪ್ರಸ್ತಾಪ ಮಾಡಿದಾಗ ಆದಷ್ಟು ಬೇಗ ಏನಾದರೂ ಒಂದು ಪರಿಹಾರವನ್ನು ಕೊಡುತ್ತೇನೆಂದು ಅಶ್ವಾಸನೆಯನ್ನು ಕೊಟ್ಟಿದ್ದೆ. ಇಲ್ಲಿ

ಕಾರ್ಪೊರೇಷನ್ ನೌಕರರುಗಳು ಏನು ಇದ್ದಾರೆ, ಎಲ್ಲರೂ ರಿಟ್ ಮುಖಾಂತರ ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದರು, ಅಲ್ಲಿ ನೀವು ಸೆಮಟ್ರಲೈಸ್ಡ್ ಸರ್ವೀಸ್ ಮಾಡಿ ಎಂದು ಒಂದು ಅಭಿಪ್ರಾಯವನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ನಾವು ಕಲಂ: 9! (ಎ) ಅನ್ವಯ ಒಂದು ನಗರಪಾಲಿಕೆಯಿಂದ ಮತ್ತೊಂದು ನಗರಪಾಲಿಕೆಗೆ ವರ್ಗಾವಣೆ ಮಾಡುವಂತಹ ಅಧಿಕಾರ ಸರ್ಕಾರಕ್ಕೆ ಇದೆ. ಆದರೆ ಕೇಂದ್ರೀಕೃತ ಸೇವೆ ಪ್ರಾಧಿಕಾರವನ್ನು ರಚನೆ ಮಾಡುವಂತಹ ಒಂದು ಚಿಂತನೆ ಸರ್ಕಾರದ ಪರಿಶೀಲನೆಯಲ್ಲಿದೆ. ಆದರೆ ನಾವು ಇಲ್ಲಿ ಯಾವ ವಿಚಾರದಲ್ಲಿ ಮಾಡಬೇಕು. ಸೆಂಟ್ರಲ್ ಕೇಡರ್ ಮ್ಯಾನೇಜ್ ಮೆಂಟ್ ಅಥಾರಿಟಿ ಮುಖಾಂತರ ಮಾಡಬಹುದೇ ಇಲ್ಲವೇ ಎಂಬುದರ ಬಗ್ಗೆ ಈಗಾಗಲೇ ಲಾ ಡಿಪಾರ್ಟ್ ಮೆಂಟ್‌ನ ಅಭಿಪ್ರಾಯವನ್ನು ಕೇಳಿದ್ದೇವೆ. ಏಕೆಂದರೆ, ಪ್ರತಿ ಹಂತದಲ್ಲಿಯೂ ಕೂಡ ಈ ನೌಕರರು ಬೆಂಗಳೂರು ಬಿಟ್ಟು ಹೋಗಬಾರದು, ಮಂಗಳೂರು ಬಿಟ್ಟು ಹೋಗಬಾರದು, ಹುಬ್ಬಳ್ಳಿ ನಗರ ಬಿಟ್ಟು ಹೋಗಬಾರದು ಎಂದು ಅವರದೇ ಆದಂತಹ ದೊಡ್ಡ ಲಾಭ ಇದೆ. ಇದನ್ನು ತಡೆಗಟ್ಟಬೇಕೆಂಬುದು ನನ್ನ ಅಭಿಪ್ರಾಯವಿದೆ, ಆದಷ್ಟು ಬೇಗ ಇದಕ್ಕೆ ಒಂದು ರೂಪವನ್ನು ಕೊಡುವುದರ ಬಗ್ಗೆ ನಾನು ಸಹಾಯವನ್ನು ಮಾಡುತ್ತೇನೆ. ಮಾನ್ಯ ಯೋಗೀಶ್ ಭಟ್‌ರವರು ಕಾರ್ಪೊರೇಷನ್ ಬಗ್ಗೆ ತಾವು ಪ್ರಶ್ನೆಯನ್ನು ಕೇಳಿದರೆ ನಾನು ಹೇಳಬಹುದು. ನೀವು ಬೇರೆ ಬೇರೆ ಇಲಾಖೆಗಳ ಬಗ್ಗೆಯೂ ಈ ರೀತಿ ಮಾಡಬಹುದೆ ಎಂದು ಕೇಳುತ್ತಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳು ನನಗೆ ಬೇರೆ ಇಲಾಖೆಗಳನ್ನು ಕೊಟ್ಟಮೇಲೆ ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ರಾಜ್ಯದಲ್ಲಿ ವಿದ್ಯುತ್ ಸುಧಾರಣೆಗೆ ವೇಗವರ್ಧನೆ ವಿತರಣಾ ವ್ಯವಸ್ಥೆ ಪುನರ್ ರಚನೆಗೆ ಯೋಜನೆ

589 (5102) : ಶ್ರೀ ಲಕ್ಷ್ಮೀ ನಾರಾಯಣ ಎಂ.ಡಿ. (ಅಣ್ಣಯ್ಯ) (ತುರುವೇಕೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿದ್ಯುತ್ ಸುಧಾರಣೆಗೆ ವೇಗವರ್ಧನೆ ವಿತರಣಾ ವ್ಯವಸ್ಥೆ ಪುನರ್ ರಚನೆಗೆ ಯೋಜನೆ ರೂಪಿಸಲಾಗಿದೆಯೆ.

ಆ) ಈ ಯೋಜನೆಗಳು ಪ್ರಗತಿಯಲ್ಲಿವೆಯೆ ಇವುಗಳ ಅಂದಾಜು ಮೊತ್ತವೆಷ್ಟು.

ಇ) ಇವು ಯಾವಾಗ ಪೂರ್ಣಗೊಳ್ಳಲಿವೆ; ಮತ್ತು ಇದನ್ನು ರಾಜ್ಯದ ಯಾವ ಯಾವ ವಲಯಗಳಿಗೆ (ವೃತ್ತ) ವಿಸ್ತರಿಸಲಾಗುವುದು;

ಈ) ಕೇಂದ್ರದ ಸುಧಾರಣಾ ಕಾರ್ಯಕ್ರಮ ಲಾಭದಾಯಕವೆಂದು ರಾಜ್ಯ ಸರ್ಕಾರ ಪರಿಗಣಿಸಿದೆಯೆ;

ಉ) ಇದರ ಪ್ರಯೋಜನ ಪಡೆದು ಮೊದಲ ಸ್ಥಾನದಲ್ಲಿರುವ ಜಿಲ್ಲೆ ಯಾವುದು?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಪ್ರಸ್ತುತ ಮೈಸೂರು, ಬೆಳಗಾಂ, ಬಿಜಾಪುರ ಮತ್ತು ಹುಬ್ಬಳ್ಳಿ ವೃತ್ತಗಳಲ್ಲಿ ಈ ಯೋಜನೆಯು ಪ್ರಗತಿಯಲ್ಲಿದೆ. ಇವುಗಳ ಅಂದಾಜು ಮೊತ್ತ ರೂ. 570.7 ಕೋಟಿಗಳು ಅಲ್ಲದೇ ಬೆಂಗಳೂರುನಗರ, ತುಮಕೂರು, ಕೆ.ಜಿ.ಎಫ್. ದಾವಣಗೆರೆ, ಹಾಸನ, ಮಂಗಳೂರು, ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಪಟ್ಟಣಗಳಲ್ಲಿ ಹಾಗೂ ಮೈಸೂರು, ಬೆಳಗಾಂ, ಬಿಜಾಪುರ ಮತ್ತು ಹುಬ್ಬಳ್ಳಿ ವೃತ್ತಗಳ